# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 2380 |
| ಸದಸ್ಯರ ಹೆಸರು | : | ಶ್ರೀ ಸಿ.ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸುವವರು | : | ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು. |
| ಉತ್ತರಿಸಬೇಕಾದ ದಿನಾಂಕ | : | 27.03.2026. |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಳೆದ 3 ವರ್ಷಗಳಲ್ಲಿ ರಾಜ್ಯದಲ್ಲಿ 8,355 ಬಾಲ್ಯವಿವಾಹ ಪ್ರಕರಣಗಳ ವಿರುದ್ಧ ದೂರುಗಳು ದಾಖಲಾಗಿದ್ದು, ಅವುಗಳಲ್ಲಿ ಎಷ್ಟು ಪ್ರಕರಣಗಳಲ್ಲಿ ಎಫ್.ಐ.ಆರ್ ದಾಖಲಿಸಿ, ಕ್ರಮ ಕೈಗೊಳ್ಳಲಾಗಿದೆ;</td><td>ಕಳೆದ 3 ವರ್ಷಗಳಲ್ಲಿ ರಾಜ್ಯದಲ್ಲಿ ಬಾಲ್ಯವಿವಾಹ ಪ್ರಕರಣಗಳ ಮಾಹಿತಿ ಈ ಕೆಳಗಿನಂತಿದೆ.<br>
<table>
<tr><th>ಕ್ರ. ಸಂ.</th><th>ವರ್ಷ (ಕ್ಯಾಲೆಂಡ್)</th><th>ಸ್ವೀಕರಿಸಿದ ದೂರುಗಳ ಸಂಖ್ಯೆ</th><th>ಬಾಲ್ಯವಿವಾಹ ತಡೆದ ಸಂಖ್ಯೆ</th><th>ಬಾಲ್ಯವಿವಾಹ ನಡೆದ ಸಂಖ್ಯೆ</th><th>ಎಫ್. ಐ. ಆರ್ ದಾಖಲಿಸಿದ ಸಂಖ್ಯೆ</th></tr>
<tr><td>A</td><td>B</td><td>C</td><td>D</td><td>E</td><td>F</td></tr>
<tr><td>1</td><td>2023</td><td>2605</td><td>1775</td><td>830</td><td>830</td></tr>
<tr><td>2</td><td>2024</td><td>3127</td><td>2323</td><td>804</td><td>804</td></tr>
<tr><td>3</td><td>2025</td><td>3044</td><td>2394</td><td>650</td><td>650</td></tr>
<tr><td colspan="2">ಒಟ್ಟು</td><td>8776</td><td>6492</td><td>2284</td><td>2284</td></tr>
</table>
ಮೇಲಿನಂತೆ ರಾಜ್ಯದಲ್ಲಿ ಬಾಲ್ಯವಿವಾಹಕ್ಕೆ ಸಂಬಂಧಿಸಿದಂತೆ ಪ್ರತಿ ವರ್ಷ ಬಾಲ್ಯವಿವಾಹ ದಾಖಲಾಗಿರುವ ಪ್ರಕರಣಗಳಲ್ಲಿ ಎಲ್ಲಾ ಪ್ರಕರಣಗಳಿಗೂ ಎಫ್.ಐ.ಆರ್. ದಾಖಲಿಸಲು ಕ್ರಮವಹಿಸಲಾಗಿದೆ.</td></tr>
<tr><td>ಆ)</td><td>ಮೈಸೂರು ಜಿಲ್ಲಾಡಳಿತವು ಬಾಲ್ಯವಿವಾಹ ತಡೆದ ಗ್ರಾಮ ಪಂಚಾಯಿತಿಗಳಿಗೆ 25 ಸಾವಿರ ರೂ.ಗಳ ಬಹುಮಾನ ಘೋಷಿಸಿರುವ ಮಾದರಿಯನ್ನು ರಾಜ್ಯಾದ್ಯಂತ ಜಾರಿಗೆ ತರುವ ಯೋಜನೆ ಸರ್ಕಾರದ ಮುಂದಿದೆಯೇ;</td><td>ದಿನಾಂಕ:06.01.2026 ರಂದು ಬಾಲ್ಯವಿವಾಹ ಮುಕ್ತ ಭಾರತ ರಾಜ್ಯವನ್ನಾಗಿಸಲು ರಾಜ್ಯ ಸರ್ಕಾರ ನೂತನವಾಗಿ ಗ್ರಾಮ ಪಂಚಾಯತಿ ಮಟ್ಟದಲ್ಲಿ ಶೂನ್ಯ ಸಹಿಷ್ಣುತೆ (ಬಾಲ್ಯವಿವಾಹ ಮುಕ್ತ ಪಂಚಾಯತ್) ಹೊಂದಿದ ಗ್ರಾಮ ಪಂಚಾಯತಿಗೆ ರೂ.25,000/- ಗಳ ಪ್ರೋತ್ಸಾಹ ಧನ ನೀಡಲು ಎಲ್ಲಾ ಜಿಲ್ಲೆಗಳಲ್ಲಿ ಕ್ರಮವಹಿಸುವಂತೆ ನಿರ್ದೇಶಿಸಲಾಗಿದ್ದು, ಪ್ರತಿ ಜಿಲ್ಲೆಯಿಂದ ಒಂದು ಶೂನ್ಯ ಸಹಿಷ್ಣುತೆ (ಬಾಲ್ಯವಿವಾಹ ಮುಕ್ತ ಪಂಚಾಯತ್) ಹೊಂದಿದ ಗ್ರಾಮ ಪಂಚಾಯತಿಯ ಆಯ್ಕೆಗೆ ಕ್ರಮವಹಿಸಲಾಗುತ್ತಿದೆ.</td></tr>
<tr><td>ಇ)</td><td>ಬಾಲ್ಯವಿವಾಹಕ್ಕೆ ಸಹಕರಿಸುವ ಪುರೋಹಿತರು ಮತ್ತು ಕುಟುಂಬದವರ ವಿರುದ್ಧ ಕನಿಷ್ಟ 2 ವರ್ಷ ಶಿಕ್ಷೆ ಹಾಗೂ 2 ಲಕ್ಷ ರೂ.ದಂಡ ವಿಧಿಸುವ ಕಾನೂನನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲು ಕೈಗೊಂಡಿರುವ ಕ್ರಮಗಳೇನು?</td><td>ಬಾಲ್ಯವಿವಾಹಗಳು ಸಂಭವಿಸಿದ ಸಂದರ್ಭದಲ್ಲಿ ನಿಯಮಾನುಸಾರ FIR ದಾಖಲಿಸಿ ಕಾನೂನು ಕ್ರಮಗಳ ಶಿಕ್ಷೆ ಮತ್ತು ದಂಡವಿಧಿಸುವುದು ನ್ಯಾಯಾಲಯದ ಅಂತಿಮ ತೀರ್ಪಿಗೆ ಒಳಪಟ್ಟಿರುತ್ತದೆ.</td></tr>
</table>

**ಸಂಖ್ಯೆ: ಮಮಇ 71 ಮಭಾಬ 2026**

(ಲಕ್ಷ್ಮೀ ಆರ್. ಹೆಬ್ಬಾಳ್ಕರ್)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಹಾಗೂ ಹಿರಿಯ ನಾಗರೀಕರ
ಸಬಲೀಕರಣ ಸಚಿವರು.